ದ್ವಾರದ ಮೇಲ್ಭಾಗದಲ್ಲಿರುವ ಖಗೋಳ ಶಾಸ್ತ್ರ ಸಂಬಂಧಿ ಗಡಿಯಾರವು ರಾಶಿ ಚಿಹ್ನೆಗಳೊಂದಿಗೆ ಸೂರ್ಯ ಚಂದ್ರರ ಸ್ಥಾನವನ್ನೂ ತೋರಿಸುತ್ತದೆ. ಹಾಗೂ ಸಾಗರಿಕ ಉದ್ಯಮದ ರಾಜಧಾನಿಯಾಗಿ ಓಸ್ಲೋ ನಗರದ ಐತಿಹಾಸಿಕ ಪಾತ್ರವನ್ನು ಪ್ರತಿಬಿಂಬಿಸುತ್ತದೆ ಕೂಡ ಎಂದಳು ನಮ್ಮ ಗೈಡ್.

## ರಾಯಲ್ ಪ್ಯಾಲೇಸ್

ನಾರ್ವೆಯಲ್ಲಿ ಇರುವುದು ಸಂವಿಧಾನಾತ್ಮಕ ರಾಜಪ್ರಭುತ್ವ. ರಾಜನಿಗೆ ಇಲ್ಲಿ ವಿಶೇಷ ಗೌರವವಿದೆ. ಹತ್ತೊಂಬತ್ತನೇ ಶತಮಾನದ ಮಧ್ಯ ಭಾಗದಲ್ಲಿ ನಾರ್ವೆ ಮತ್ತು ಸ್ವೀಡನ್ನನ್ನು ಆಳಿದ್ದ ಮೂರನೇ ಚಾರ್ಲ್ಸ್ ಮೊದಲು ವಾಸಿಸಿದ್ದ ರಾಯಲ್ ಪ್ಯಾಲೇಸ್ ಸುತ್ತಲೂ ಸುಂದರವಾದ ಉದ್ಯಾನವನ ಇದೆ. 173 ಕೋಣೆಗಳಿರುವ ಅರಮನೆಯ ಎದುರಿಗೆ ಸ್ವತಂತ್ರ ನಾರ್ವೆಯ ಪ್ರಥಮ ರಾಜನಾಗಿ ಆಳಿದ್ದ ಚಾರ್ಲ್ಸ್ ಜಾನನ ಪ್ರತಿಮೆ ಇದೆ.

## ಸಂಸತ್ ಭವನ, ನ್ಯಾಷನಲ್ ಥಿಯೇಟರ್

ಹಳದಿ ಇಟ್ಟಿಗೆಗಳ ಪಾರ್ಲಿಮೆಂಟ್ ಕಟ್ಟಡ 1866ರಿಂದ ಬಳಕೆಯಲ್ಲಿದೆ. ಎರಡನೇ ಮಹಾಯುದ್ಧದ ಕಾಲದಲ್ಲಿ ಇದು ಜರ್ಮನರ ವಶವಾಗಿತ್ತು. ಪ್ರಾರಂಭದಲ್ಲಿ ಇದನ್ನು ಜೈಲಾಗಿಯೂ ಬಳಸಲಾಗಿತ್ತಂತೆ. 1951ರಿಂದ ಹಂತಹಂತವಾಗಿ ಈ ಕಟ್ಟಡದ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಯಿತು. ಸಂಜೆಯ ಸಮಯದಲ್ಲಿ ನಾವು ನಾವೇ ಅಲ್ಲಿಗೆ ಹೋದವರು ಸಂಸತ್ ಭವನದ ಆವರಣದಲ್ಲಿ ಓಡಿಯಾಡುತ್ತಾ ನಮ್ಮನ್ನು ಮಾತನಾಡಿಸಲೆಂಬಂತೆ ಹಾರಿ ಬರುತ್ತಿದ್ದ ನಾರ್ವೆಜಿಯನ್ ಸೀಗುಲ್ ಹಕ್ಕಿಗಳನ್ನು ನೋಡುತ್ತಾ, ಅವುಗಳ ಗಾಗಾಗಾ ಕೂಗು ಕಿವಿದುಂಬಿಸಿಕೊಳ್ಳುತ್ತಾ ಸಂತೋಷಪಟ್ಟೆವು.

ಅರಮನೆ ಮತ್ತು ಪಾರ್ಲಿಮೆಂಟಿನ ಮಧ್ಯದಲ್ಲಿರುವುದೇ ನ್ಯಾಷನಲ್ ಥಿಯೇಟರ್. 'ಆಲಿಸ್ ಇನ್ ದ ವಂಡರ್ ಲ್ಯಾಂಡ್' ಮತ್ತೂ ಕೆಲವು ನಾಟಕಗಳ ಪ್ರದರ್ಶನ ಫಲಕಗಳು ಥಿಯೇಟರಿನ ಮುಂದಿದ್ದವು. ಓಸ್ಲೋ ಪೇಟೆಯಲ್ಲಿ ನಾವು ಕಾಲ್ನಡಿಗೆಯಲ್ಲಿ ಇಲ್ಲಿಗೆ ನಡೆದು ಬರುತ್ತಿದ್ದಾಗ ಹಳದಿ ಜರ್ಕಿನ್ ಧರಿಸಿದ್ದ ಬೆಳ್ಳಿಗೂದಲ ಯುವತಿಯರು ಮೂವರು ನಗುತ್ತಾ ಜೋರಾಗಿ ಏನೋ ಹೇಳುತ್ತಾ ನಮ್ಮೆಲ್ಲರ ಕೈಗೆ ಚಾಕ್ಲೇಟುಗಳನ್ನು ತುರುಕಿದರು! ಅದೇನೆಂದು ಇಂಗ್ಲಿಷ್‌ನಲ್ಲಿ ಕೇಳಿದಾಗ ಆ ಚಾಕ್ಲೇಟನ್ನು ನಮಗೆಲ್ಲಾ ಪರಿಚಯಿಸುವುದಂತೆ!

## 1100 ಕೋಣೆಗಳ ಒಪೆರಾ ಹೌಸ್

ಓಸ್ಲೋಫ್ಯೋರ್ಡ್ ಬಂದರಿನ ಪಕ್ಕದಲ್ಲಿರುವ ನಸುನೀಲಿ ಬಣ್ಣದ 1100 ಕೋಣೆಗಳಿರುವ 'ಒಪೆರಾ ಹೌಸ್' ನಗರದ ಹೆಮ್ಮೆಯ ನಿರ್ಮಾಣಗಳಲ್ಲೊಂದು. ದೇಶದ ಸಾಂಸ್ಕೃತಿಕತೆಯನ್ನು ಬಿಂಬಿಸುವ ಅತಿ ದೊಡ್ಡ ಕಟ್ಟಡ ಎಂಬುದು ನಾರ್ವೆಜಿಯನ್ನರ ಹೆಮ್ಮೆ. ಈ ಕುರಿತು ಜಾಗತಿಕ ಮಟ್ಟದ ಹಲವು ಪ್ರಶಸ್ತಿಗಳೂ ಇದರ ವಾಸ್ತು ನಿರ್ಮಾಣ ಶೈಲಿಗೆ ಸಂದಿವೆ. ಬೇಸಿಗೆ ಮತ್ತು ಶರದ್ ಋತುವಿನಲ್ಲಿ ಅಲ್ಲಿ ಅನುಗಾಲವೂ ಬ್ಯಾಲೆ, ಸಂಗೀತ, ಚಿತ್ರೋತ್ಸವಗಳಂತಹ ಕಾರ್ಯಕ್ರಮಗಳು ನೆರವೇರುತ್ತಿರುತ್ತವೆ.



ಗಣ್ಯರೊಂದಿಗೆ ರಾಜಕುಟುಂಬದವರು ಸಭೆ ನಡೆಸುವ ಹಾಲ್



ಟಿಹಾಲ್‌ನ ಉತ್ತರದ ಪ್ರವೇಶ ದ್ವಾರದಲ್ಲಿ ಖಗೋಳ ಗಡಿಯಾರ

ಒಪೆರಾ ಹೌಸ್ ತಲುಪಲು ಎತ್ತರಕ್ಕೆ ಏರಿ ಹೋಗಬೇಕು. ತುಟ್ಟತುದಿಗೆ ಹೋದಾಗ ಇಡಿಯ ಓಸ್ಲೋ ನಗರದ ವಿಹಂಗಮ ನೋಟ ಕಣ್ಣು ತುಂಬುತ್ತದೆ. ಒಳಭಾಗದಲ್ಲಿ ಏರಿ ಹೋಗಲು ತಿರುವುಗಳನ್ನೊಳಗೊಂಡ ಮರದ ಗೋಡೆಗಳ ವಿನ್ಯಾಸವಿದೆ. ನಾರ್ವೆ ದೇಶದಲ್ಲಿ ಜನವಸತಿ ನೆಲೆಸಿ ಮನೆಗಳಾಗುವುದಕ್ಕಿಂತ ಮೊದಲಿನ ಪರಿಸ್ಥಿತಿಯ ಕುರಿತ ಹತ್ತು ನಿಮಿಷಗಳ ಒಂದು ಉಚಿತ ಸಿನಿಮಾ ಪ್ರದರ್ಶನ ನಾವು ಹೋದಾಗ ಇತ್ತು. ಹೊಂಗೂದಲ ನೀಲಿಗಂಗಳ ಚೆಲುವೆ ಸ್ವಾಗತಕಾರಿಣಿ ನಮ್ಮೊಂದಿಗೆ ಪ್ರೀತಿಯಿಂದ ಮಾತನಾಡಿ ಎಲ್ಲರಿಗೂ ಒಂದೊಂದು ಚಾಕ್ಲೇಟ್ ಕೊಟ್ಟಳು.

## ಹಾಲ್ಮೆನ್ ಕೋಲೆನ್, ಸ್ಕೀ ನೆಗೆತದ ಬೆಟ್ಟ

1892ರಿಂದ ಹಿಮದ ಮೇಲೆ ಜಾರುವ ಆಟ ಸ್ಕೀಯಿಂಗ್‌ನ ಉತ್ಸವ ಇಲ್ಲಿ ನೆರವೇರುತ್ತದೆ. ಚಳಿಗಾಲದ ಸ್ಕೀಯಿಂಗ್ ಒಲಂಪಿಕ್ ನೆರವೇರುತ್ತಿದೆ. 70 ಸಾವಿರ ಜನ ವೀಕ್ಷಿಸಬಹುದಾದ ತೆರೆದ ಬಯಲ ಕ್ರೀಡಾಂಗಣ ಇಲ್ಲಿದೆ. ಸ್ಕೀಯಿಂಗ್ ನಾರ್ವೆಜಿಯನ್ನರ ರಾಷ್ಟ್ರೀಯ ಆಟ. ಮಹಿಳೆಯರೂ ಭಾಗವಹಿಸುತ್ತಾರೆ. ಈ ಬೆಟ್ಟವನ್ನೇರಲು ಕಡಿದಾದ ತಿರುವುಗಳ ದ್ವಿಪಥದ ಇಕ್ಕಟ್ಟಾದ ರಸ್ತೆಯಲ್ಲಿ ನಮ್ಮ ಬಸ್ ಹೋಗುತ್ತಿದ್ದಾಗ ಆ ಎತ್ತರದಿಂದ ಓಸ್ಲೋ ನಗರದ ನೋಟ ವಿಭಿನ್ನವಾಗಿ ಕಾಣುತ್ತಿತ್ತು. ಬೆಟ್ಟದ ಮಡಿಲಲ್ಲಿ ಹಲವು ವಸತಿಯ ಮನೆಗಳು ಕಂಡು ಬಂದವು. ಅಲ್ಲೊಂದು ಚರ್ಚ್ ಇದ್ದು ರಾಜಕುಟುಂಬದವರು ಇಲ್ಲಿಯೇ ಕ್ರಿಸ್‌ಮಸ್ ಪ್ರಾರ್ಥನೆಗೆ ಬರುವುದಂತೆ. ಈ ಚರ್ಚ್ ಇರುವ ತಾಣ ದೇಶದ ಸಾಂಸ್ಕೃತಿಕ ಪರಂಪರೆಯ ತಾಣಗಳಲ್ಲೊಂದು.

ನಗರವನ್ನು ಸುತ್ತುವರಿದ ಓಸ್ಲೋಫ್ಯೋರ್ಡ್‌ಲ್ಲಿ ಖಾಸಗಿಯವರ ಸಾವಿರಾರು ದೋಣಿಗಳು ಜಮಾಯಿಸಿದ್ದವು. ಅಲ್ಲಿನ ಮೆಟ್ರೋರೈಲು, ಟ್ರಾಂಗಳಲ್ಲಿ ಟಿಕೆಟ್ ಪಡೆದು ಬೇಕೆಂದಲ್ಲಿ ಹತ್ತಿ ಇಳಿದು ನಗರ ದರ್ಶನ ಮಾಡಬಹುದು. ಕಟ್ಟುನಿಟ್ಟಾದ ಸಂಚಾರ ನಿಯಮ ಪಾಲನೆಯಿದೆ. ಪಾರ್ಕಿಂಗ್ ಇಲ್ಲದಿರುವಲ್ಲಿ ನಿಲ್ಲಿಸಿದ್ದ ಕಾರೊಂದು ಪೋಲೀಸರಿಂದ ಜುಲ್ಮಾನೆಯ ಹಳದಿ ಚೀಟಿ ಅಂಟಿಸಿಕೊಂಡು ನಿಂತಿತ್ತು.

ನಾರ್ವೆಜಿಯನ್ನರಿಗೆ ಸೈಕಲ್ ಹೆಚ್ಚು ಪ್ರಿಯವಾದದ್ದು. ಸಾಧ್ಯವಾದಷ್ಟೂ ಸಾರ್ವಜನಿಕ ಸಂಚಾರ ಸಾಧನಗಳನ್ನೇ ಸಂಚಾರಕ್ಕೆ ಹೆಚ್ಚು ಬಳಸಲು ಇಷ್ಟಪಡುವವರು. ಪ್ರಕೃತಿದತ್ತವಾದ ನಿಸರ್ಗ ರಮಣೀಯತೆಗೆ ಇಂತಹ ಮನೋಭಾವದಿಂದಾಗಿ ಜನರೂ ತಮ್ಮ ಕೊಡುಗೆ ನೀಡುತ್ತಿದ್ದಾರೆನ್ನಿಸಿತು.